ಸಿನಿಮಾ ಹಾಡು ಬರೆದ ಸಿದ್ಧಲಿಂಗಯ್ಯ ಮುಂದೆ ತಮ್ಮ ಹೆಸರಿನಲ್ಲೇ ಹಾಡು ಬರೆದರು. ಅವರ 'ನಲವತ್ತೇಳರ ಸ್ವಾತಂತ್ರ್ಯ' ಕವಿತೆ ಜನಪ್ರಿಯ ಸಿನಿಮಾವೊಂದರ ಹಾಡೂ ಆಯಿತು. ಮುಂದೊಮ್ಮೆ ಸಿದ್ಧಲಿಂಗಯ್ಯನವರನ್ನು, 'ಸಿನಿಮಾಕ್ಕೆ ಹಾಡು ಬರೆಯುವುದನ್ನು ಬಿಟ್ಟಿದ್ದೇಕೆ?' ಎಂದು ಕೇಳಿದ್ದೆ. 'ದುಡ್ಡಿನ ಅಗತ್ಯ ಇದ್ದಾಗ ಈ ಥರ ಹಾಡು ಬರೀತಾ ಇದ್ದೆ. ಬರಬರ್ತಾ, ಇತ್ತ ದುಡ್ಡೂ ಇಲ್ಲ, ಅತ್ತ ಸಾಹಿತಿಗಳಿಂದ ಸಿನಿಮಾಕ್ಕೆ ಹಾಡು ಬರೆದು ಕೆಟ್ಟೋದ ಅಂತ ಕೆಟ್ಟೆಸರು ಬೇರೆ! ಅದಕ್ಕೇ ಬಿಟ್ಟುಬಿಟ್ಟೆ!' ಎಂದು ಕವಿಗಳು ಆರಾಮಾಗಿ ನುಡಿದಿದ್ದರು.

ಇಪ್ಪತ್ತನೆಯ ಶತಮಾನದ ಕೊನೆಯಲ್ಲಿ ಸಿದ್ಧಲಿಂಗಯ್ಯನವರು ಕನ್ನಡ ಅಧ್ಯಾಪಕರ ಪುನರ್ಮನನ ಶಿಬಿರವೊಂದರಲ್ಲಿ ಮಾತಾಡುತ್ತಿದ್ದಾಗ ಕೆಲವು ಅಧ್ಯಾಪಕರು, 'ನಿಮ್ಮ ಕವಿತೆಗಳಲ್ಲಿ ಹಳೆಯ ರೊಚ್ಚು ಇಲ್ಲವಲ್ಲ?' ಎಂದು ಟೀಕಿಸಿದರು. ಇದು ತೊಂಬತ್ತರ ದಶಕದ ಹೊತ್ತಿಗೆ ಸಿದ್ಧಲಿಂಗಯ್ಯನವರು ತಮ್ಮ ಹಳೆಯ ಓದುಗರಿಂದ ಎದುರಿಸುತ್ತಿದ್ದ ಕಾಯಂ ಪ್ರಶ್ನೆಯೂ ಆಗಿತ್ತು. ಕಾಲದ ಓಟದಲ್ಲಿ ಕವಿಯ ಕಾವ್ಯತತ್ತ್ವ ಬದಲಾಗಿತ್ತು; ಕವಿತೆಯ ಭಾಷೆಯೂ, ಪ್ರತಿಮೆಗಳೂ ಬದಲಾಗಿದ್ದವು. ಅವರ ಹಿಂದಿನ ಕವಿತೆಯಲ್ಲಿ, 'ನಿನ್ನೆ ದಿನ ನನ್ನ ಜನ ಬೆಟ್ಟದಂತೆ ಬಂದರು' ಎಂಬ ಕ್ರಾಂತಿಚಿತ್ರವಿತ್ತು; ಮುಂದಿನ ಘಟ್ಟದ ಕವಿತೆಯಲ್ಲಿ, 'ಆ ಬೆಟ್ಟದಲ್ಲಿ, ಬೆಳದಿಂಗಳಲ್ಲಿ ಸುಳಿದಾಡಬೇಡ ಗೆಳತಿ' ಎಂಬ ರಮ್ಯ ನೇವರಿಕೆಯಿತ್ತು. 'ಕ್ರಾಂತಿಯ ಬಿರುಗಾಳಿಯಲ್ಲಿ' ಹುಟ್ಟಿದ್ದ ಅವರ ವ್ಯಗ್ರ ಭಾವಗೀತೆ ಈಗ ಸರಳ ಕೋಮಲ ಭಾವಗೀತೆಯಾಗಿತ್ತು. ಆದರೆ, ಅವರ ಆರಂಭದ ಕಾವ್ಯದಿಂದಾಗಿಯೂ ಕಣ್ಣು ತೆರೆದಿದ್ದ ಓದುಗರು ಅವರ ಮುಂದಿನ ಕಾವ್ಯದ ರಮ್ಯ ಧಾಟಿಯನ್ನು ಪ್ರಶ್ನಿಸುತ್ತಿದ್ದರು. ಕೆಲವು ಓದುಗರು ತಮ್ಮ ಕವಿತೆಗಳ ಪ್ರತಿಮೆಗಳನ್ನು, ನಿಲುವುಗಳನ್ನು ಪ್ರಶ್ನಿಸಿದಾಗ, ತಮ್ಮ ಸಂಕಲನದ ಮುಂದಿನ ಆವೃತ್ತಿಗಳಲ್ಲಿ ಕವಿಯೇ ಅವನ್ನು ಬದಲಿಸಿದ ಪ್ರಸಂಗಗಳೂ ಇವೆ. ಪಠ್ಯಪುಸ್ತಕವೊಂದರ ತಯಾರಿಯ ಸಂದರ್ಭದಲ್ಲಿ, ತಮ್ಮ 'ಅಂಬೇಡ್ಕರ್' ಕವಿತೆಯ ಪಂಕ್ತಿಯೊಂದನ್ನು, 'ಬಿಟ್ಬಿಡಿ ನಟರಾಜ್!' ಎಂದು ಅವರು ಆರಾಮಾಗಿ ಹೇಳಿದ ಸಂದರ್ಭ; 'ಗಾಂಧಿ' ಪದ್ಯದ ಸಾಲೊಂದನ್ನು ದೂರದರ್ಶನದ ರೆಕಾರ್ಡಿಂಗಿನಲ್ಲಿ ಏಕಾಏಕಿ ಬದಲಿಸಿ ಓದಿದ ಕಿಲಾಡಿತನ – ಎರಡೂ ಇದೇ ಈಗ ನಡೆದಂತೆ ನನ್ನ ಕಣ್ಣ ಮುಂದಿವೆ!

## ಕಾಮಿಕ್ ಜಾನಪದದ ಸುತ್ತಮುತ್ತ

ಈ ಎಲ್ಲದರ ನಡುವೆ ಸಿದ್ಧಲಿಂಗಯ್ಯನವರ ಕಾವ್ಯ ಎಂದಿನ ಪ್ರಗತಿಪರ ವಲಯಗಳ ಆಚೆಗೂ ಓದುಗರನ್ನು ಸೃಷ್ಟಿಸಿಕೊಳ್ಳುತ್ತಿತ್ತು. ಜೊತೆಗೆ, ಬಗೆಬಗೆಯ ಒಳ–ಹೊರ ಒತ್ತಡಗಳಿಂದಾಗಿ ಅನೇಕ ಥರದ ಸಭೆಗಳಲ್ಲಿ ಅವರು ಕಾಣಿಸಿಕೊಳ್ಳತೊಡಗಿದ್ದರು. ಹನ್ನೆರಡು ವರ್ಷಗಳ ವಿಧಾನ ಪರಿಷತ್ತಿನ ಶಾಸಕತ್ವ ಅವರಿಗೆ ಎಲ್ಲ ಬಗೆಯ ರಾಜಕೀಯ ಪಕ್ಷಗಳಲ್ಲೂ ಗೆಳೆಯರನ್ನು ಸೃಷ್ಟಿಸಿತ್ತು. ಬೇರೆ ಬೇರೆ ವಲಯಗಳ ಜನ 'ಇವ ನಮ್ಮವ, ಇವ ನಮ್ಮವ' ಎಂದು ಅವರತ್ತ ಕೈ ಚಾಚತೊಡಗಿದ್ದರು. ಕವಿಯ ರಾತ್ರಿಗಳು ದೀರ್ಘವಾಗತೊಡಗಿದ್ದವು, ಕವಿದೇಹ ದಣಿಯುತ್ತಿತ್ತು. ಕವಿತೆಯ ಕಟ್ಟಡ ತೆಳುವಾಗತೊಡಗಿತ್ತು. ಅತಿ ಸಾರ್ವಜನಿಕತೆಯ ಹೊರ ವ್ಯಕ್ತಿತ್ವ ಮತ್ತು ಕವಿತೆಯ ಒಳ ಸೂಕ್ಷ್ಮಗಳು ಎರಡನ್ನೂ ಏಕಕಾಲಕ್ಕೆ ನಿಭಾಯಿಸುವುದು ಯಾವ ಕವಿಗೂ ಸುಲಭವಲ್ಲ. ಜೊತೆಗೆ, ತಾನು ಕಂಡ ಸೂಕ್ಷ್ಮ ಸತ್ಯಗಳನ್ನು ಮಂಡಿಸಲು ಸಾರ್ವಜನಿಕ ಗಣ್ಯತೆಯ ಭಾರವೂ ಸಿದ್ಧಲಿಂಗಯ್ಯನವರ ಕಾವ್ಯಕ್ಕೆ, ಮಾತಿಗೆ ಅಡ್ಡಿಯಾಗಿತ್ತು. ಇದರ ಜೊತೆಗೆ, ಕವಿಯ ಸಾಂದರ್ಭಿಕ ಕಥಾಪ್ರಸಂಗಗಳ ಜನಪ್ರಿಯತೆಯಿಂದಾಗಿ ರಾಜಕೀಯ ವಲಯ, ಅಧಿಕಾರಿಗಳ ವಲಯ, ಸಾಹಿತ್ಯ ವಲಯ, ಚಳವಳಿ ವಲಯ ಮುಂತಾದ ಎಲ್ಲ ವಲಯದವರೂ ವಿನೋದ ಪ್ರಸಂಗಗಳಿಗಾಗಿ ಅವರನ್ನು ಮುತ್ತಿಕೊಳ್ಳತೊಡಗಿದರು. ಆ ಕಾಮಿಕ್ 'ಜನಪದ' ಕತೆಗಳಲ್ಲಿ ಮುಕ್ತ ಹಾಸ್ಯದಿಂದ ಹಿಡಿದು